# ಪ್ರಶಾಂತ್ ರೀಎಂಟ್ರಿ




ಪ್ರಶಾಂತ್ ಸಿದ್ದಿ ತಮ್ಮ ವೃತ್ತಿಬದುಕಿನಲ್ಲಿ ಬ್ರೇಕ್‌ನ ನಿರೀಕ್ಷೆಯಲ್ಲಿದ್ದಾರೆ. ಒಂದಿಷ್ಟು ಚ್ಯೂಸಿಯಾಗಿ ಆಯ್ದುಕೊಂಡ ಪಾತ್ರಗಳು ತಮ್ಮ ಪ್ರತಿಭೆಯನ್ನು ಸಾಬೀತುಗೊಳಿಸಲು ನೆರವಾಗುತ್ತವೆ ಎಂಬ ನಂಬಿಕೆ ಅವರದ್ದು

■ ಪದ್ಮನಾಭ ಭಟ್

'ಪರಮಾತ್ಮ', 'ಕೆಂಡಸಂಪಿಗೆ' ಸಿನಿಮಾಗಳನ್ನು ನೋಡಿದವರಿಗೆ ಈ ಮುಖವನ್ನು ಸುಲಭಕ್ಕೆ ಮರೆಯುವುದು ಸಾಧ್ಯವಿಲ್ಲ. ಅದರಲ್ಲಿಯೂ 'ಕೆಂಡಸಂಪಿಗೆ'ಯ ಕೊನೆಯಲ್ಲಿ ಹಣದ ಕಟ್ಟನ್ನು ಹಿಡಿದು ಸ್ಟೈಲಿಷ್ ಆಗಿ ಬೀಸುತ್ತ ನಿಂತವನ ಕಥೆ ಏನಿರಬಹುದು ಎಂಬುದನ್ನು ತಿಳಿದುಕೊಳ್ಳುವ ಕಾರಣಕ್ಕಾಗಿಯೇ ಅದರ ಮುಂದಿನ ಭಾಗ 'ಕಾಗೆ ಬಂಗಾರ'ವನ್ನು ನಿರೀಕ್ಷಿಸುತ್ತಿರುವವರ ಸಂಖ್ಯೆಯೂ ದೊಡ್ಡದೇ ಇದೆ.

ಪ್ರಶಾಂತ ಸಿದ್ದಿ ಉತ್ತರ ಕನ್ನಡ ಜಿಲ್ಲೆಯ ಮಂಚಿಕೇರಿಯಿಂದ ಬಂದು, ನೀನಾಸಮ್ ಎಂಬ ರಂಗಕಮ್ಮಟದೊಳಗೆ ಹದಗೊಂಡು, ರಂಗಭೂಮಿಯಲ್ಲಿಯೂ ಹಲವು ವರ್ಷ ಕೆಲಸ ಮಾಡಿ ಚಿತ್ರರಂಗಕ್ಕೆ ಬಂದ ಹುಡುಗ.

ಪ್ರಶಾಂತ್ ಕಪ್ಪು ಮುಖ, ಹೊಳಪುಕಂಗಳು, ಹಿಹ್ಹಿ.. ಎಂದು ಸಣ್ಣಮಕ್ಕಳಂತೆ ನಕ್ಕರೆ ಹೊಳೆಯುವ ಹಲ್ಲುಗಳು, ಬೇಕು ಬೇಕಾದ ಹಾಗೆ ಬದಲಾಗುವ ಮುಖದ ರೇಖೆಗಳಲ್ಲಿ ಇರುವ ನಟನೆಯ ಹೊಳಪನ್ನು ಸಿನಿಮಾರಂಗದಲ್ಲಿ ಮೊದಲು ಗುರ್ತಿಸಿದ್ದು ಯೋಗರಾಜ ಭಟ್ಟರು.

ತಮಗೆ ಸಿಕ್ಕ ಪಾತ್ರಗಳನ್ನು ಪ್ರೇಕ್ಷಕ ಮೆಚ್ಚಿ ಅಹುದಹುದೆನ್ನುವಂತೆ ನಿರ್ವಹಿಸಿದರೂ ಪ್ರಶಾಂತ್‌ಗೆ ಅವಕಾಶಗಳ ಮಳೆಯೇನೂ ಸುರಿಯಲಿಲ್ಲ. 'ಕೆಂಡಸಂಪಿಗೆ' ಚಿತ್ರದ ನಂತರ ಹೆಚ್ಚೂಕಮ್ಮಿ ಪ್ರಶಾಂತ್ ನಾಪತ್ತೆಯೇ ಆಗಿಬಿಟ್ಟಿದ್ದರು. ಒಂದೆರಡು ಸಿನಿಮಾಗಳಲ್ಲಿ ನಟಿಸಿದರೂ ಅದು ಹೇಳಿಕೊಳ್ಳುವಂಥ ಪಾತ್ರವೂ ಆಗಿರಲಿಲ್ಲ; ಹೇಳಿಕೊಳ್ಳುವಂಥ ಗೆಲುವನ್ನೂ ದಾಖಲಿಸಲಿಲ್ಲ.

ನಾಲ್ಕು ವರ್ಷಗಳ ಅಜ್ಞಾತವಾಸದ ನಂತರ ಪ್ರಶಾಂತ್ ಮತ್ತೀಗ ತೆರೆಯ ಮೇಲೆ ಹೊಸ ಹೊಸ ಬಗೆಯ ಪಾತ್ರಗಳಲ್ಲಿ ರೀ ಎಂಟ್ರಿ ಕೊಡಲು ಸಜ್ಜಾಗಿದ್ದಾರೆ.

'ಎಲ್ಲಿದ್ರಿ ಇಲ್ಲೀತನಕ?' ಎಂದು ಕೇಳಿದರೆ 'ಎಲ್ಲಿ ಹೋಗ್ಲಿ ನಾನು? ಇಲ್ಲೇ ಇದ್ದೇನೆ' ಎಂದು ನಗುತ್ತಾರೆ. 'ಒಂದಿಷ್ಟು ಸಿನಿಮಾಗಳಲ್ಲಿ ನಟಿಸಿದೆ. ಆದರೆ ಅವು ಅಷ್ಟೊಂದು ವರ್ಕ್ ಆಗಲಿಲ್ಲ. 'ಕೆಂಡಸಂಪಿಗೆ'ಯ ನಂತರ ನನಗೆ ಒಂದೇ ರೀತಿಯ ಪಾತ್ರಗಳು ಬರುತ್ತಿದ್ದವು. ಕಾಮಿಡಿ ಪಾತ್ರಗಳನ್ನು ಬಿಟ್ಟು ಬೇರೆ ಬೇರೆ ಪಾತ್ರಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳಬೇಕು ಎಂಬ ಆಸೆಯಿಂದ ನಾನೊಂದಿಷ್ಟು ಚ್ಯೂಸಿ ಆದೆ. ಆದರೆ ಕೆಲವು ಸಲ ರಾಜಿ ಆಗಲೇಬೇಕಾಗುತ್ತದೆ. ಹಾಗಂತ ಈಗ ಪೂರ್ತಿ ರಾಜಿ ಆಗಿಲ್ಲ. ಈಗ ನಾನು ಅಭಿನಯಿಸಿರುವ ನಾಲ್ಕೂ ಸಿನಿಮಾಗಳು ತುಂಬ ಭಿನ್ನವಾದವು. 'ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ' ಎಂಬ ಚಿತ್ರದಲ್ಲಿ ಮುಖ್ಯಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದೇನೆ. ಒಂದು ರೀತಿಯ ಕಲಾತ್ಮಕ ಸಿನಿಮಾ ಅದು. ಸೂರಿ ಅವರ 'ಪಾಪ್‌ಕಾರ್ನ್ ಮಂಕಿ ಟೈಗರ್' ಸಿನಿಮಾದಲ್ಲಿಯೂ ನಟಿಸುತ್ತಿದ್ದೇನೆ. ಗುರು ದೇಶಪಾಂಡೆ ಅವರ 'ಜಂಟಲ್‌ಮೆನ್' ಸಿನಿಮಾದಲ್ಲಿಯೂ ಒಂದು ಮುಖ್ಯ ಪಾತ್ರ ಮಾಡುತ್ತಿದ್ದೇನೆ. 'ಬ್ಲ್ಯಾಂಕ್' ಎಂಬ ಮತ್ತೊಂದು ಸಿನಿಮಾದಲ್ಲಿ ಡ್ರಗ್ ಡೀಲರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ' ಎಂದು ಸದ್ಯಕ್ಕೆ ತೊಡಗಿಕೊಂಡಿರುವ ಚಿತ್ರಗಳ ಕುರಿತು ವಿವರಣೆ ನೀಡುತ್ತಾರೆ ಪ್ರಶಾಂತ್.

'ಪಾಪ್‌ಕಾರ್ನ್ ಮಂಕಿ ಟೈಗರ್' ಸಿನಿಮಾ ನಂತರ ಸೂರಿ ಕೈಗೆತ್ತಿಕೊಳ್ಳಲಿರುವ 'ಕಾಗೆ ಬಂಗಾರ' ಸಿನಿಮಾ ತಮ್ಮ ವೃತ್ತಿಬದುಕಿನಲ್ಲಿ ಹೊಸ ತಿರುವು ನೀಡುತ್ತದೆ ಎಂಬ ವಿಶ್ವಾಸ ಅವರಿಗಿದೆ.

ಸಿನಿಮಾದ ಜೊತೆಜೊತೆಗೇ ರಂಗಭೂಮಿಯ ಜೊತೆಗೂ ಅವರು ನಿರಂತರ ಒಡನಾಟ ಇರಿಸಿಕೊಂಡಿದ್ದಾರೆ. ಸದ್ಯಕ್ಕೆ 'ವೇಷ' ರಂಗತಂಡಕ್ಕೆ ಶೂದ್ರ ಶ್ರೀನಿವಾಸ ಅವರ 'ಬದುಕಿಗೊಂದು ಮಾತಿದ್ದಿದ್ದರೆ' ಎಂಬ ನಾಟಕವನ್ನು ಅವರೇ ನಿರ್ದೇಶನ ಮಾಡುತ್ತಿದ್ದಾರೆ. ಸಿನಿಮಾರಂಗಕ್ಕೆ ಬರುವ ಹಲವು ಹೊಸಮುಖಗಳಿಗೆ ನಟನೆಯ ತರಬೇತಿ ಕೊಡುವ ಕೆಲಸವನ್ನೂ ಮಾಡುತ್ತಿದ್ದಾರೆ.

ನಟನಾ ಬದುಕಿನಲ್ಲಿ ಬ್ರೇಕ್‌ನ ನಿರೀಕ್ಷೆಯಲ್ಲಿರುವ ಪ್ರಶಾಂತ್‌ಗೆ ನಿರ್ದೇಶನದ ಕನಸೂ ಇದೆ. 'ನನ್ನೊಳಗೆ ನಿರ್ದೇಶನದ ಕನಸು ಬಿತ್ತಿದ್ದು ಸೂರಿ ಸರ್ ಮತ್ತೆ ನನ್ನ ಸ್ನೇಹಿತೆ ನಿರ್ಮಲಾ ನಾದನ್. ಅವರಿಬ್ಬರೂ ಯಾವಾಗಲೂ ನನಗೆ ನೀನು ಸಿನಿಮಾ ನಿರ್ದೇಶನ ಮಾಡು ಅಂತಿರ್ತಾರೆ. ನನಗೂ ನಿರ್ದೇಶನ ಮಾಡಬೇಕು ಎಂಬ ಆಸೆ ಇದೆ. ಹಾಗಾಗಿಯೇ ಸಾಧ್ಯವಾದಾಗಲೆಲ್ಲ ಸಿನಿಮಾದ ಬೇರೆ ಬೇರೆ ವಿಭಾಗಗಳ ಬಗ್ಗೆ ತಿಳಿದುಕೊಳ್ಳುತ್ತ ಇರುತ್ತೇನೆ. ನಾಲ್ಕು ಕಥೆಗಳನ್ನೂ ಸಿದ್ಧಮಾಡಿಟ್ಟುಕೊಂಡಿದ್ದೇನೆ. ಅದಕ್ಕೂ ಮುನ್ನ ನನಗೆ ನಮ್ಮ ಸಿದ್ದಿ ಜನರನ್ನು ಇಟ್ಟುಕೊಂಡು ಒಂದು ಆಲ್ಬಂ ಸಾಂಗ್ ಮಾಡಬೇಕು ಎಂಬ ಆಸೆ ಇದೆ. ಅದನ್ನು ನಮ್ಮ ಊರಿನಲ್ಲಿಯೇ ಚಿತ್ರೀಕರಣ ಮಾಡಬೇಕು ಎಂಬ ಕನಸೂ ಇದೆ. ಎಲ್ಲವೂ ಯಾವಾಗ ಸಾಧ್ಯವಾಗುತ್ತದೋ ನೋಡಬೇಕು' ಎಂದು ಊರಲ್ಲಿ ಬೇರು ಬಿಟ್ಟು ಬಣ್ಣದ ಲೋಕದಲ್ಲಿ ಚಿಗಿತುಕೊಳ್ಳುವ ಹಂಬಲವನ್ನು ಪ್ರಶಾಂತ್ ವ್ಯಕ್ತಪಡಿಸುತ್ತಾರೆ. ■